ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2017-18ನೇ ಸಾಲಿನಲ್ಲಿ 2016-17ನೇ ಸಾಲಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಕೇಂದ್ರ ಸಹಾಯಧನವನ್ನು ವರ್ಗಾಯಿಸುವ ಕುರಿತು.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 92 ಜೈಅಯೋ 2016, ದಿನಾಂಕ 10.02.2017.
2. CEO, ZP, ಬೆಳಗಾವಿ ಪತ್ರ ಸಂಖ್ಯೆ ಜಿಪಂ/ಅವಿ/ ರಾಜೈಅಯೋ /ವಿವ-2/2016-17, ದಿನಾಂಕ 15.06.2017, 27.04.2017 ಮತ್ತು 15.02.2017.
3. CEO, ZP, ಬೆಳಗಾವಿ ಪತ್ರ ಸಂಖ್ಯೆ ಜಿಪಂ/ಅವಿ/ರಾಜೈಅಯೋ /ವಿವ-2/2016-17, ದಿನಾಂಕ 13.09.2017.

**ಪ್ರಸ್ತಾವನೆ :**

ಮೇಲೆ (1)ರ ಆದೇಶದಲ್ಲಿ ಬೆಳಗಾವಿ ಜಿಲ್ಲಾ ಪಂಚಾಯತಿಗೆ ರೂ.101.12ಲಕ್ಷಗಳನ್ನು ಬೆಂಗಳೂರು(ನ), ಹಾವೇರಿ, ಮೈಸೂರು, ಚಿಕ್ಕಮಗಳೂರು ಬಳ್ಳಾರಿ, ಮತ್ತು ಹಾಸನ ಜಿಲ್ಲಾ ಪಂಚಾಯತ್‌ಗಳಿಂದ ಹಿಂಪಡೆದು ವರ್ಗಾಯಿಸಲಾಗಿತ್ತು. ಇದರನ್ವಯ ಬೆಂಗಳೂರು(ನ), ಹಾವೇರಿ ಮತ್ತು ಮೈಸೂರು ಜಿಲ್ಲಾ ಪಂಚಾಯತ್‌ಗಳನ್ನು ಹೊರತುಪಡಿಸಿ ಬಳ್ಳಾರಿ, ಹಾಸನ, ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ಗಳಿಂದ ಹಿಂಪಡೆದ ಅನುದಾನವನ್ನು ಬೆಳಗಾವಿ ಜಿಲ್ಲಾ ಪಂಚಾಯತ್‌ಗೆ ವರ್ಗಾಯಿಸಿರುವುದಿಲ್ಲ.

ಈ ಕುರಿತು CEO, ZP, ಬೆಳಗಾವಿ ರವರು ಮೇಲೆ ಓದಲಾದ (2)ರ ಪತ್ರದಲ್ಲಿ ಸಂಬಂಧಿತ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಅನುದಾನವನ್ನು ವರ್ಗಾಯಿಸುವಂತೆ ಕೋರಿದ್ದರೂ ಸಹ ಇದುವರೆವಿಗೂ ಅನುದಾನವನ್ನು ವರ್ಗಾಯಿಸಿರುವುದಿಲ್ಲ.

ಮುಂದುವರೆದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ ರವರು ಮೇಲೆ ಓದಲಾದ (3)ರ ಪತ್ರದಲ್ಲಿ 2016-17ನೇ ಸಾಲಿಗೆ ಸಂಬಂಧಿಸಿದಂತೆ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಸರ್ಕಾರದಿಂದ ಹಾಗೂ ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳಿಂದ ರೂ.124.19ಲಕ್ಷಗಳ ಸಹಾಯಧನ ಪಾವತಿಸಲು ಬಾಕಿ ಇದ್ದು, ಈ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುವುದನ್ನು ಕಾರ್ಯಕ್ರಮದ ಹಿತದೃಷ್ಟಿಯಿಂದ ಪರಿಗಣಿಸಿ, 2016-17ನೇ ಸಾಲಿನ ರಾಯಚೂರು, ಬಳ್ಳಾರಿ, ಗದಗ ಮತ್ತು ಚಾಮರಾಜನಗರ ಜಿಲ್ಲಾ ಪಂಚಾಯತ್‌ಗಳ ಕಾರ್ಯಕ್ರಮದ ಹಣ ಬಳಕೆ ಪ್ರಮಾಣ ಪತ್ರದನ್ವಯ ವಿನಿಯೋಗಿಸದೇ ಬಾಕಿ ಇರುವ / ಲಭ್ಯವಿರುವ ಅನುದಾನದಲ್ಲಿ ಅಗತ್ಯವಿರುವ ಅನುದಾನವನ್ನು ಕಾರ್ಯಕ್ರಮದ ಹೆಸರಿನಲ್ಲಿರುವ Rural Development and Panchayath Raj Department (NBMMP) ಉಳಿತಾಯ ಖಾತೆ **64215755384**, IFSC Code-SBIN0040526, State Bank of India, M.S.Building Branch, Bangalore ಇಲ್ಲಿಗೆ ಹಿಂಪಡೆದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಬೆಳಗಾವಿ ರವರಿಗೆ RTGS ಮೂಲಕ ವರ್ಗಾಯಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/92/ಜೈಅಯೋ/2016 ಬೆಂಗಳೂರು, ದಿನಾಂಕ 12.12.2017.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು, ಬಳ್ಳಾರಿ, ಗದಗ ಮತ್ತು ಚಾಮರಾಜನಗರ ರವರು ಕೆಳಕಂಡಂತೆ ಹಿಂಪಡೆದ ಅನುದಾನವನ್ನು

ಅಂದರೆ ಒಟ್ಟಾರೆ ರೂ.124.19ಲಕ್ಷಗಳನ್ನು ಕೂಡಲೇ ಕಾರ್ಯಕ್ರಮದ ಹೆಸರಿನಲ್ಲಿರುವ Rural Development and Panchayath Raj Department (NBMMP) ಉಳಿತಾಯ ಖಾತೆ **64215755384,** IFSC Code-SBIN0040526, State Bank of India, M.S.Building Branch, Bangalore ಇಲ್ಲಿಗೆ RTGS ಮೂಲಕ ವರ್ಗಾಯಿಸಿ ಸರ್ಕಾರಕ್ಕೆ ವರದಿ ಮಾಡುವಂತೆ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಜಿಲ್ಲೆ | 31.03.2017ರ ಅಂತ್ಯಕ್ಕೆ ಕಾರ್ಯಕ್ರಮದಡಿ ಉಳಿಕೆ ಮೊತ್ತ | ಹಿಂಪಡೆದ ಅನುದಾನ |
|---|---|---|
| ರಾಯಚೂರು | 63.30 | 60.00 |
| ಬಳ್ಳಾರಿ | 23.92 | 22.00 |
| ಗದಗ | 22.00 | 20.00 |
| ಚಾಮರಾಜನಗರ | 23.94 | 22.19 |
| **ಒಟ್ಟು** | **133.16** | **124.19** |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು ಜಿಲ್ಲಾ ಪಂಚಾಯತ್, ಬೆಳಗಾವಿ, ರಾಯಚೂರು, ಬಳ್ಳಾರಿ, ಗದಗ ಮತ್ತು ಚಾಮರಾಜನಗರ.
3. ಪ್ರಧಾನ ವ್ಯವಸ್ಥಾಪಕರು, SBI, M.S. Building Branch, Bangalore.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ರವರ ಅಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ.
5. ವಿಶೇಷಾಧಿಕಾರಿ, ಇಲಾಖಾ ಗಣಕ ಕೇಂದ್ರ, ಗ್ರಾಅಪ ಇಲಾಖೆ.
6. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ.